**ವ್ಯಾಖ್ಯಾನ**

# <u>ಅಪಮಾನವಾದರೆ ಒಳಿತು</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 43.

**ಕೀರ್ತನೆಯ ಚಿಂತನೆ:**

ಸಾಮಾನ್ಯವಾಗಿ ಎಲ್ಲರನ್ನು ಅಚ್ಚರಿಗೊಳಿಸುವ ಮಾತು 'ಅಪಮಾನವಾದರೆ ಒಳಿತು' ಎಂಬ ವಾಕ್ಯ. ಸಜ್ಜನರೆನ್ನಿಸಿದವರು ಜೀವನದಲ್ಲಿ ಅಪೇಕ್ಷಿಸುವುದು ಎಂದಿಗೂ ಯಾರಿಂದಲೂ ಅಪಮಾನಕ್ಕೆ – ಮರ್ಯಾದೆಗೆ ಚ್ಯುತಿವಾಗದಿರಲೆಂದು. ಆದರೂ ಕುಟುಂಬ ಸದಸ್ಯರಿಂದ, ಸಮಾಜದಲ್ಲಿ ಮನುಷ್ಯ ಒಂದಲ್ಲಾ ಒಂದು ರೀತಿಯಿಂದ ಮಾನಾಪಮಾನಗಳಿಗೆ ಒಳಗಾಗುವ. ಒಂದಂತೂ ಸತ್ಯ. ಯಾರೂ ಅಪಮಾನವನ್ನು ಬಯಸರು. ಆದರೆ ಶ್ರೀಪುರಂದರದಾಸರು ಒಂದು ಕೀರ್ತನೆಯಲ್ಲಿ 'ಅಪಮಾನವಾದರೆ ಒಳಿತು' ಎಂದರು. ಇದು ಎಂತಹ ವಿಪರ್ಯಾಸವೆಂದು ಎಂತಹವರಿಗೂ ಅನಿಸದಿರದು. ಅಂದರೆ ಇಲ್ಲಿ ದಾಸರ ಅಭಿಪ್ರಾಯ ಅಥವಾ ಹಾರ್ದವಾದರೂ ಏನೆಂಬುದು ಕುತೂಹಲಕಾರಿ. ಇಲ್ಲಿ ದಾಸರು ಅದ್ಭುತ ಪರಿಕಲ್ಪನೆಯನ್ನು ನಮ್ಮ ಮುಂದಿಟ್ಟಿರುವರು. ತಿಳಿಯಲು ಪ್ರಯತ್ನಿಸೋಣ.

**ಅಪಮಾನವಾದರೆ ಒಳಿತು** ॥ ಪ ॥

**ಅಪರೂಪ ಹರಿನಾಮ ಜಪಿಸುವ ಮನುಜಗೆ**
**ಅಪಮಾನವಾದರೆ ಒಳಿತು** ॥ ಅ.ಪ ॥

ಶ್ರೀ ಪುರಂದರರು ಒಂದು ಕಡೆ 'ನಿಂದಕರಿರಬೇಕಿರಬೇಕು' ಎಂದ ಮಾತು ನೆನಪಾದರೆ ಈ ಪಲ್ಲವಿಯನ್ನು ಅರ್ಥೈಸುವುದು ಸುಲಭವಾದೀತು. ಇದರಿಂದ ಎರಡು ಲಾಭ. ನಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳಲು ಅನುವಾದರೆ ಮತ್ತೊಂದು ದುರ್ಜನರಿಂದ ದೂರವಿದ್ದು ನಮ್ಮ ಸಾಧನೆಯನ್ನು ಪೂರೈಸಲು ಸಾಧ್ಯವಾಗುವುದು. ಅಂದರೆ ಜೀವನದಲ್ಲಿ ಅಪಮಾನವಾಯಿತೆಂದರೆ

ದುಃಖಪಡುವ, ಅಪಮಾನ ಮಾಡಿದವರನ್ನು ದ್ವೇಷಿಸುವ ಅವಶ್ಯಕತೆ ಇಲ್ಲ. ಕಾರಣ ಪುಣ್ಯ ಸಾಧನೆಗೆ ತಾನಾಗಿಯೇ ಸೂಕ್ತ ವ್ಯವಸ್ಥೆ ಆದಂತೆ.

ಭಗವಂತನಲ್ಲೆ ಏಕಚಿತ್ತನಾಗಿ ಹರಿನಾಮವನ್ನು ಜಪಿಸುವ, ಚಿಂತಿಸುವ ಮನುಜನಿಗೆ ಇನ್ನೇತರ ಭಯ. ಈ ಶ್ರೀಹರಿಯ ನಾಮದ ಮಹತ್ವ ಅರಿತವಗೆ ಚಿಂತೆ ನಿಶ್ಚಿಂತೆ. ದಾಸರು ತಮ್ಮ ಒಂದು ಉಗಾಭೋಗದಲ್ಲಿ ಹರಿನಾಮದ ಮಹತ್ವವನ್ನು–

**ಹರಿ ನಿಮ್ಮ ನಾಮವ ಸ್ಮರಿಸಲು ದುರಿತ ಪೀಡಿಪುದುಂಟೆ**
**ಅರಿತು ಭಜಿಪರಿಗೆಲ್ಲ ಕೈವಲ್ಯ ಜೋಕೆ**
**ಕರುಣವಾಂತು ತನ್ನ ಮಗನ ಕೂಗಿದವಗೆ**
**ಮರಣ ಕಾಲದಿ ಒದಗಿದ ಪುರಂದರವಿಠಲ ॥**

**'ಹರಿನಾಮಸ್ಮರಣೆ ಒಂದಿದ್ದರೆ ಸಾಲದೆ'** ಎಂದಂತೆ ಹರಿನಾಮ ಜಪಿಸುವ ಮನುಜಗೆ ಇದರಿಂದಾಗಿ ಯಾರಾದರೂ ಹೀಯಾಳಿಸಿದರೆ – ಅಪಮಾನಿಸಿದರೆ – ತಿರಸ್ಕರಿಸಿದರೆ ಒಳಿತಲ್ಲವೆ. ಇಂತಹ ಪ್ರಸಂಗದಲ್ಲಿ ನಮ್ಮ ತಾಳ್ಮೆ–ಸಹನೆ ಉಪಕಾರಕವಾಗಿ ಪುಣ್ಯ ವೃದ್ಧಿಗೆ ಪೂರಕವಲ್ಲವೆ. ಅದಕ್ಕೆ ದಾಸರು ಹೀಗೆಂದ ಮಾತು.

ಶ್ರೀಮದಾಚಾರ್ಯರು ಹೇಳಿದ್ದನ್ನು ಸ್ಮರಿಸಬೇಕು –

**'ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್'** ॥ ಎಂಬುದು ಮನದಲ್ಲಿ ದೃಢವಾಗಿದ್ದಲ್ಲಿ, ಇದನ್ನು ತಿರಸ್ಕರಿಸುವ ದುರ್ಜನರಿಂದಾಗುವ ಅಪಮಾನ ಒಳಿತೆ.

ಮನುಷ್ಯ ಯಾವಾಗಲೂ ನಾನು–ನನ್ನದು ಎಂಬ ದುರಭಿಮಾನದಿಂದ ಸದಾ ಮಾನ–ಮರ್ಯಾದೆಗಾಗಿ ಕಿತ್ತಾಡಿ – ಗುದ್ದಾಡಿ, ಸೆಣಗಾಡಿ, ಗಳಿಸಲು ಮಾಡಬಾರದ್ದನ್ನೆಲ್ಲಾ ಮಾಡುತ್ತಾ ಸೆಣಗಾಡಿದರೆ, ಅವುಗಳಿಂದ ಉಂಟಾಗುವ ಪರಿಣಾಮ ಎಂತಹದ್ದೆಂದು ಬಣ್ಣಿಸುವರು.

**ಮಾನದಿಂದಭಿಮಾನ ಪುಟ್ಟುವುದು**
**ಮಾನದಿಂದ ತಪಹಾನಿಯಾಗುವುದು**

**ಮಾನಿ ದುರ್ಯೋಧನನಗೆ ಹಾನಿಯಾಯಿತು**

**ಅನುಮಾನವಿಲ್ಲ ಮಾನ ಅಪಮಾನ ಸಮನಿಗೆ ॥ 1 ॥**

ಸಾಮಾನ್ಯವಾಗಿ ಮನುಷ್ಯನಿಗೆ ಮಾನ–ಮರ್ಯಾದೆ ಗೌರವಾದಿಗಳು ಲಭಿಸುತ್ತಾ ಹೋದಲ್ಲಿ ತನ್ನತನದ ಮೇಲೆ ಅಭಿಮಾನ, ಅಹಂಕಾರಾದಿಗಳು ಬರುವುದು ಸಹಜ. ಮಾನ–ಸನ್ಮಾನಗಳಿಂದ ವ್ಯಕ್ತಿಯ 'ಕಣ್ಣು ತಲೆಮೇಲೆ ಹೋಗುತ್ತೆ' ಎನ್ನುವ ನಾನ್ನುಡಿಯು ಇದ್ದೇ ಇದೆ. ಇದು ಯಾರಿಗೂ ಹೊರತಲ್ಲ. **'ವಿದ್ವಾಂಸಮಪಿ ಕರ್ಷತಿ'** ಎಂದಂತೆ ಆಗಿ ಉದ್ಧಾರದ ಸಾಧನೆಗೆ ತೊಡಕಾಗುವುದು ಸಹಜ. ಹೀಗೆ ಎಲ್ಲವನ್ನೂ ಕಂಡಿದ್ದ ದಾಸರು **'ಮಾನದಿಂದ ಅಭಿಮಾನ ಹುಟ್ಟುವುದು',** ಮನಸ್ಸಿನ ಏಕಾಗ್ರತೆ ಕ್ಷೀಣಿಸಿ ತಪಸ್ಸು–ಧ್ಯಾನಾದಿಗಳಿಗೂ ಕಂಠಕವಾಗುವುದು. ಇಲ್ಲಿಯ ಮತಿತಾರ್ಥ ಸಾಧನೆಗೆ ಅಡ್ಡಿಯಾಗುವ, ಮನಸ್ಸಿನ ಚಾಂಚಲ್ಯವನ್ನೂ ಹೆಚ್ಚಿಸುವ ಮಾನ–ಸನ್ಮಾನಗಳ ಬೇಡವೇ ಬೇಡ ಬದಲಾಗಿ ಅವಮಾನವಾದರೇ ಒಳಿತು ಎಂದು ಧರ್ಮಸೂಕ್ಷ್ಮವನ್ನು ದಾಸರು ತಿಳಿಸಿದರು.

ಭಗವಂತನನ್ನು ಮೆಚ್ಚಿಸಿ, ಅವನ ಅನುಗ್ರಹಕ್ಕೆ ಪಾತ್ರನಾಗಲು ಬೇಕಾದದ್ದು ಜ್ಞಾನ–ಭಕ್ತಿ–ವೈರಾಗ್ಯಗಳ ಸಂಗ. ಇದನ್ನು ಗಳಿಸಲು ಮೊದಲು ಮಾಡಬೇಕಾದದ್ದು ಅರಿಷಡ್ವರ್ಗಗಳ ಅಸಂಗ. ಈ ಮಾನ – ಸಮ್ಮಾನಗಳಿಂದ ಮೇಲೆ ಹೇಳಿದಂತೆ ಅಭಿಮಾನಾದಿ ತ್ಯಾಗ ಬಹುಕಷ್ಟಸಾಧ್ಯ. ಇದಕ್ಕೆ ವ್ಯತ್ಯಸ್ಥವಾಗಿ ಅಪಮಾನಾದಿಗಳು ಆದಲ್ಲಿ ಅಧ್ಯಯನ–ಅಧ್ಯಾಪನ, ಜಪ–ತಪ, ಧ್ಯಾನ–ಸಮಾಧಿಗಳನ್ನು ಪಡೆಯಲು ಸಾಧ್ಯ. ಅದಕ್ಕೆ ದಾಸರು ತಮ್ಮ ನುಡಿಗಳನ್ನು ನಮ್ಮ ಮುಂದಿಟ್ಟರು. ಈ ಮಾನ–ಸಮ್ಮಾನಗಳಿಗಾಗಿ ಹೊಡೆದಾಡಿ, ಸೆಣಗಾಡಿದ ದುರ್ಯೋಧನ ಪಡೆದದ್ದು ಸರ್ವನಾಶ. ಅದಕ್ಕೆ ದಾಸರು ಶ್ರೀಕೃಷ್ಣ ಹೇಳಿದಂತೆ 'ಮಾನಾಪಮಾನಯೋ ....' ಸಮದೃಷ್ಟಿ ಉಳ್ಳವನಾಗಿ ಸಮನೆನಿಸಿಕೊಂಡಲ್ಲಿ ಜೀವನದಲ್ಲಿ ಏನನ್ನು ಸಾಧಿಸಲು ಸಾಧ್ಯ ಎಂದರು. ಸುಖ–ದುಃಖ, ಲಾಭಾಲಾಭ, ಜಯಾಪಜಯ, ಮಾನಾಪಮಾನಗಳನ್ನು ಸಮನಾಗಿ ಕಂಡು ಮನಸ್ಸನ್ನು ವಿಚಲಿತಗೊಳಿಸದೆ ಇದ್ದಲ್ಲಿ ಅವನನ್ನು ಸ್ಥಿತಪ್ರಜ್ಞನೆಂದು ಶ್ರೀಕೃಷ್ಣ ಕರೆದನು. ಈ ದಿಶೆಯನ್ನು ಪಡೆಯುವ ಪ್ರಯತ್ನ ಮಾಡಿರೆಂದು ಶ್ರೀ ಪುರಂದರದಾಸರು ಉಪದೇಶಿಸಿದರು.

**ಅಪಮಾನದಿಂದಲಿ ತಪ ವೃದ್ಧಿಯಾಗುವುದು**

**ಅಪಮಾನದಿಂದಲಿ ಪುಣ್ಯ ಸಫಲವಾಗುವುದು**

**ಅಪಮಾನದಿಂದಲಿ ನೃಪ ಧ್ರುವರಾಯಗೆ**

**ಕಪಟ ನಾಟಕ ಕೃಷ್ಣ ಅಪರೋಕ್ಷನಾದ ॥ 2 ॥**

ದಾಸರು ಮೇಲಿನ ಪದ್ಯದಲ್ಲಿ ಮಾನ-ಸಮ್ಮಾನದಿಂದ ಏನಾಗಬಹುದೆಂದು ಹೇಳಿ ಇಲ್ಲಿ ಅಪಮಾನದಿಂದ ಏನಾಗಬಹುದೆಂಬುದನ್ನು ತಿಳಿಸುವರು. ದಾಸರು ಒಂದು ಕಡೆ –

**ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲಿಸಿದರು**

**ಭಂಗಿಸಿ ಭಂಗಿಸಿ ಎನಗೆ ಬಯಲಾಸೆ ಕೆಡಿಸಿದರು**

**ಕಂಗೆಡಿಸಿ ಕಾಮಕ್ರೋಧ ಬಿಡಿಸಿದರು......**

ಹೀಗೆ ಹೇಳಿದ್ದನ್ನು ನೋಡಿರುವೆವು. ಅಂದರೆ ಹುಟ್ಟಿಬಂದ ಸ್ವಾಭಿಮಾನವುಳ್ಳ, ಸಜ್ಜನನಿಗೆ ಜೀವನದಲ್ಲಿ ಪೆಟ್ಟುಗಳು ಬಿದ್ದಾಗ (ಮನಸ್ಸಿಗೆ ತಾಪವುಂಟಾದಾಗ) ಬದಲಾಗುವುದನ್ನು ಕಂಡಿರುವೆವು. ಅದನ್ನೇ ದಾಸರು ಇಲ್ಲಿ ಪ್ರಸ್ತಾಪಿಸಿರುವರು. ಇನ್ನೊಂದುಕಡೆ ದಾಸರು ಹೇಳಿದ್ದು ಹೀಗಿದೆ –

**'ಚೆನ್ನಾಗಿ ಬೈದೆನ್ನ ಧನ್ಯನ ಮಾಡೋ'** ಎಂದು ಶ್ರೀಹರಿಯಲ್ಲಿ ಬೇಡುವರು. ಕುಂತಿದೇವಿಯು ಶ್ರೀಕೃಷ್ಣನಲ್ಲಿ ಕೇಳಿದ್ದು ಹೀಗೆ **'ಸಂತುನಃ ವಿಪದಃ ಶಶ್ವತ್....'** ಎಂದು. ಅದರಂತೆ ಜೀವನದಲ್ಲಾಗುವ ಅಪಮಾನಾದಿಗಳಿಂದ ಸಜ್ಜನರ ತಪಸ್ಸು ವೃದ್ಧಿಯಾಗುವುದು, ಪುಣ್ಯವೂ ಲಭಿಸುವುದು. ದಾಸರು ಇಲ್ಲಿ ಒಂದು ನಿದರ್ಶನವನ್ನು ಕೊಟ್ಟದ್ದು ಎಲ್ಲರ ಕಣ್ಣನ್ನು ತೆರೆಸುವುದರಲ್ಲಿ ಸಂಶಯವಿಲ್ಲ. ಚಿಕ್ಕ ಬಾಲಕ ಧ್ರುವ ತನ್ನ ಮಲತಾಯಿ ಸುರುಚಿ ಮಾಡಿದ ಅಪಮಾನದಿಂದ ಬೇಸತ್ತು ಶ್ರೀಹರಿಯೇ ಗತಿಯೆಂದು ಅವನನ್ನೇ ಕಾಣಬೇಕೆಂಬ ಹಠದಿಂದ ಏಕಾಂಗಿಯಾಗಿ ಕಾಡಿಗೆ ಹೊರಟ. ಬಹು ಶ್ರಮದಿ ಶರೀರ-ಮನಸ್ಸನ್ನು ನಿಗ್ರಹಿಸಿ ತಪಗೈದು ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ. ಇದಕ್ಕೆ ಕಾರಣವಾದದ್ದು ಅವನಿಗಾದ ಅಪಮಾನ. ಅಂದರೆ ಯಥಾಯೋಗ್ಯವಾಗಿ ಜೀವರೂ ಸಿದ್ಧಿಯನ್ನು ಪಡೆಯಬಹುದೆಂಬ ಭರವಸೆಯನ್ನು ದಾಸರು ಈ ಮೂಲಕ ಸಾದರಪಡಿಸಿದರು. **'ಅಸನ್ಮಾನಾತ್ ತಪೋ ವೃದ್ಧಿಃ ಸನ್ಮಾನಾತ್ ತಪಃ ಕ್ಷಯಃ'** ಎಂಬ ಪುರಾಣ ವಾಕ್ಯವು ಸಪ್ರಮಾಣವಾಗಿದೆ.

**ನಾನೇನು ಮಾಡಲಿ ಯಾರಲ್ಲಿ ಪೋಗಲಿ**

**ಕಾನನಚರಾರಾಧ್ಯ ನೀನಿರಲು**

**ದೀನರಕ್ಷಕ ನಮ್ಮ ಪುರಂದರವಿಠಲ**

**ಏನೂ ಬೇಡೆನಗೆ ಅಪಮಾನವೇ ಇರಲಿ** ॥ **3** ॥

ಇಲ್ಲಿ ದಾಸರು ಭಗವದ್ಭಕ್ತನ, ಉದ್ಧಾರದ ಮಾರ್ಗವನ್ನರಿಯದ, ಸದ್ಗತಿಗಾಗಿ ಹಂಬಲಿಸುವ ಸಾಧಕಜೀವಿಯ ಆರ್ತನಾದವನ್ನು ಬಿಂಬಿಸಿರುವರು. ಜೀವನದಲ್ಲಿ ಮಾನಾಪಮಾನಗಳು ಸಹಜ. ಬಯಸದಿದ್ದರೂ ಬರುವ ಸಂಭವವಿದ್ದೇಯಿದೆ. ಹೀಗಿರುವುದರಿಂದ ಶ್ರೀಕೃಷ್ಣ ತಿಳಿಸಿದಂತೆ ಸಮ ಬುದ್ಧಿಯುಳ್ಳವನಾಗಿ ತಲೆಕೆಡಿಸಿಕೊಳ್ಳಬಾರದು. ಆದರೆ ಕ್ಷಣ ಕ್ಷಣಕ್ಕೂ ನಮ್ಮ ಆಕಾಂಕ್ಷೆ ಒಳಿತಾದುದನ್ನು ಏನು ಮಾಡಲಿ, ಯಾರಲ್ಲಿ ಮೊರೆ ಹೋಗಲಿ, ಹೇಗೆ ಸೇವಿಸಲಿ–ಭಜಿಸಲಿ, ಎಂತು ಜೀವಿಸಲಿ ಎಂಬ ಯೋಚನೆ ಇರಬೇಕೆಂದು ಸೂಚಿಸುವರು. ಎಲ್ಲರಲ್ಲೂ ಇದ್ದು ಎಲ್ಲಕ್ಕೂ ನಿಯಾಮಕನಾದ ಶ್ರೀಹರಿಯನ್ನು ಮೊರೆ ಹೋಗಲು ಆದೇಶಿಸಿದರು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

ಹೀಗೆ ಭಗವಂತ ಅವನನ್ನು ನಂಬಿದವರ ರಕ್ಷಣೆಯನ್ನು ಮಾಡುವುದಾಗಿ ಭರವಸೆ ಕೊಟ್ಟಿರುವ. ಹೀಗಾಗಿ ಅವನೇ ದೀನರ ರಕ್ಷಕ. ಅವನನ್ನೇ ಮೊರೆ ಹೋಗಬೇಕು. ಅದಕ್ಕೆಂದೆ ಚಿಂತೆ ಬಿಟ್ಟು ನಿಶ್ಚಿಂತರಾಗಿರಿ ಎಂದರು.

ಅವನನ್ನು ನಂಬಿದವರಿಗೆ ಈ ಜನರಿಂದಾಗುವ ಮಾನಾಪಮಾನಗಳು ಮನಸ್ಸಿನ ಮೇಲೆ ಪರಿಣಾಮ ಬೀರದು ಎಂದರು. ಜೀವನದಲ್ಲಿ ಹೀಗೇನಾದರು ಆದರೆ ಸಾಧನ ಜೀವಿಯ ಅನಿಸಿಕೆಯು ಹೀಗಿರಲೆಂದರು–

**ಆದದ್ದೆಲ್ಲ ಒಳಿತೇ ಆಯಿತು ನಮ್ಮ**
**ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು ॥**

ಎಂಬ ಭಾವನೆ ಇರಲೆಂದರು. ಹೀಗಿದ್ದಲ್ಲಿ ಅಂದರೆ ನಮ್ಮ ಸಾಧನೆಗೆ ಅಡ್ಡಿಯಾಗುವಂತಹ ಮಾನ–ಮಾರ್ಯಾದೆ ಬೇಡ. ಸಾಧನೆಗೆ ಮುಖವನ್ನಾಗಿಸುವ ಅಪಮಾನವೇ ಒಳಿತು ಎಂಬುದು ಒಳಿತಲ್ಲವೆ! ಮನಸ್ಸಿನ ಚಾಂಚಲ್ಯವನ್ನು ರುಜುವಾಗಿಸುವಲ್ಲಿ ಯಶಸ್ವಿಯಾದರೆ ಇಂತಹ ಅಪಮಾನಗಳು ಒಳಿತು. ಇದಕ್ಕೆ ಪಂಡಿತ–ಪಾಮರರೆಂಬ ಭೇದವಿರದು. ಅಪಮಾನಾದಿಗಳನ್ನು ಸಂತೋಷದಿ ಸ್ವೀಕರಿಸಿ ಸಾಧನೆಯ

ಸೋಪಾನವೆಂದು ಭಾವಿಸಿ ಕಾರ್ಯತತ್ಪರನಾಗುವುದೇ ಕ್ಷೇಮವೆಂಬರ್ಥದಲ್ಲಿ ಶ್ರೀ ಪುರಂದರದಾಸರು ನೀಡಿರುವ ಸಂದೇಶ ಒಳಿತನ್ನೇ ಉಂಟುಮಾಡುವುದು.

ಅಪರೂಪದ ಎಂದರೆ ಅತಿವಿರಳವಾದ ಸಾಮಾನ್ಯವಾಗಿ ದೊರೆಯದ ಹರಿನಾಮ ಅಪರಿಮಿತ ಆನಂದವನ್ನೂ ಕೊಡಬಲ್ಲದು. ಇದನ್ನೇ ಜಪಿಸುವ ಮನುಜನಿಗೆ ಅಪಮಾನವಾದರೆ ಒಳಿತು. ಇದನ್ನೇ ವರವಾಗಿ ಬೇಡಿದ ದಾಸರ ಹಾರ್ದವೂ ಅಪರೂಪವಾಗಿದೆ. ದಾಸರ ಅನುಸಂಧಾನ ನಮದಾಗಲಿ.

**ಶ್ರೀ ಕೃಷ್ಣಾರ್ಪಣಮಸ್ತು**